**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 15 ಪ್ರಾ.ಸಾ. : 8**

ಸಾಕ್ಷಿಯ ಹೆಸರು : ಅಶೋಕ
ತಂದೆಯ ಹೆಸರು : ತ್ರಿಪತಿ ಕಾನಳ್ಳಿ
ವಯಸ್ಸು : 71 ವರ್ಷ
ಉದ್ಯೋಗ : ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ವಾಸ : ದಮ್ಮನಬೈಲ್ ಶಿರಸಿ

**ದಿನಾಂಕಃ 16-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಸಿದ್ದಾಪುರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನಾಗಿ ಅಕ್ಟೋಬರ್ 2004 ರಿಂದ 2009 ರವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಮೊದಲು ನನ್ನ ಸ್ಥಾನದಲ್ಲಿ ದೇವೇಂದ್ರ ನಾಯ್ಕ ಎನ್ನುವವರು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕಾನಗೋಡು ಸ್ವಚ್ಛ ಗ್ರಾಮ ಯೋಜನೆಗೆ ರೂ. 20,00,000/- ಮಂಜೂರಾಗಿದ್ದ ಸಂಬಂಧದಲ್ಲಿ ಕಾರವಾರ ಲೋಕಾಯುಕ್ತರವರು ನನಗೆ ಮಾಹಿತಿ ಕೇಳಿದ್ದರು . ನಾನು ಬಂದ ನಂತರ ಅದರ ಕಾಮಗಾರಿ ಯಾವುದೂ ಆಗಿರುವುದಿಲ್ಲ ನಾನು ಅಲ್ಲಿ ಪ್ರಭಾರೆ ವಹಿಸಿಕೊಳ್ಳುವುದಕ್ಕೆ ಮೊದಲೇ ಎಲ್ಲಾ ಕಾಮಗಾರಿಯಾಗಿತ್ತು. ದೇವೇಂದ್ರ ನಾಯ್ಕರವರ ಅವಧಿಯಲ್ಲಿ ಸದರಿ ಕಾಮಗಾರಿ ಮುಗಿದಿತ್ತು. ಆ ಕಾಮಗಾರಿ ನಡೆಯುತ್ತಿದ್ದಾಗ ಆಗ ಇದ್ದ ದೇವೇಂದ್ರ ನಾಯ್ಕರವರು ಕಾಮಗಾರಿಯ ಪ್ರಗತಿ ವರದಿಯನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗೆ ಕಳುಹಿಸಿಕೊಟ್ಟಿದ್ದರು. ಆ ಸಂಬಂಧದಲ್ಲಿ ನಾನು ಲೋಕಾಯುಕ್ತ ಪೊಲೀಸ್ ನವರಿಗೆ ಅವರು ಕೋರಿದ್ದ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನಾನು ಆ ಕಾಮಗಾರಿಗಳ ಅಳತೆ ಪುಸ್ತಕವನ್ನು ಕೊಟ್ಟಿರುವುದಿಲ್ಲ ಕಾರಣ ಅದು ಲಭ್ಯವಿರಲಿಲ್ಲ. ನಿ.ಪಿ. 39 ನಾನು ನೀಡಿರುವ ಮಾಹಿತಿಯಾಗಿದೆ . ಅದರಲ್ಲಿ ನನ್ನ ರುಜು ಇದೆ . ಸಾಕ್ಷಿಯ ರುಜುವನ್ನು ನಿ.ಪಿ. 39(ಬಿ) ಎಂದು ಗುರುತಿಸಲಾಯಿತು. ಅದರ ಜೊತೆ ನಾನು ಎರಡು ಅಡಕಗಳನ್ನು ಸಲ್ಲಿಸಿದ್ದೇನೆ. ಅವುಗಳಲ್ಲಿ ಸಹ ನನ್ನ ರುಜು ಇದೆ . ಸಾಕ್ಷಿಯ ರುಜುಗಳನ್ನು ನಿ.ಪಿ. 39/1(ಬಿ) ಮತ್ತು ನಿ.ಪಿ. 39/2(ಬಿ)

ಎಂದು ಗುರುತಿಸಲಾಯಿತು. ಸದರಿ ಕಾಮಗಾರಿ ಅಡಿಯಲ್ಲಿ 210 ಶೌಚಾಲಯಗಳನ್ನು ನಿರ್ಮಿಸಬೇಕಾಗಿತ್ತು . ಆದರೆ ಕೇವಲ 99 ಶೌಚಾಲಯಗಳನ್ನು ಮಾತ್ರ ನಿರ್ಮಿಸಿರುವುದಾಗಿ ಲೋಕಾಯುಕ್ತ ಪೊಲೀಸ್ ನವರು ಹೇಳಿದ್ದರಿಂದ ನನಗೆ ತಿಳಿದು ಬಂತು. ನಾನು ಕಳುಹಿಸಿರುವ ದಾಖಲಾತಿಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿ ಇದೆ ಎಂದು ನಮೂದು ಇರುತ್ತದೆ .

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರು ಗೈರು ಹಾಜರು ಇದ್ದಾರೆ. ಅವರ ಪರ ಎಸ್ ಜಿ ಎನ್ ವಕೀಲರು ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ. 500/- ಭತ್ಯೆ ಪಾವತಿ ಮಾಡಲು ನಿರ್ದೇಶನ ನೀಡಲಾಗಿದೆ . ಭತ್ಯೆ ಪಾವತಿ ಮಾಡಿರುವುದಿಲ್ಲ. ಆದ್ದರಿಂದ ಸಮಯಾವಕಾಶ ಕೋರಿರುವುದನ್ನು ನಿರಾಕರಿಸಲಾಗಿದೆ . ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ